# ಮಲ್ಲಿಗೆಯೆಂಬ ನಿರಾಭರಣೆ

'ನೋಡು ಇದೊ ಇಲ್ಲರಳಿ ನಗುತಿದೆ ಏಳು ಸುತ್ತಿನ ಮಲ್ಲಿಗೆ!
'ಇಷ್ಟು ಹಚ್ಚನೆ ಹಸುರ ಗಿಡದಿಂದೆಂತು ಮೂಡಿತು ಬೆಳ್ಳಗೆ!'
–ಹೀಗೆ ಕವಿ ಜಿಎಸ್‌ಎಸ್ ಅವರು ಬೆರಗಿನಿಂದ ಉದ್ಗರಿಸುವಂತೆ ಮಾಡಿದ ಮಲ್ಲಿಗೆ ಗಾತ್ರ, ಆಕೃತಿ, ವಿನ್ಯಾಸ ಇತ್ಯಾದಿಗಳ ಮಾನದಂಡದಿಂದ ಗಮನಿಸಿದರೆ ಅಷ್ಟೇನೂ ವಿಶಿಷ್ಟವೆನ್ನಿಸುವ ಹೂವೇನಲ್ಲ. ಗುಲಾಬಿಯ ಮಾದಕತೆಯಾಗಲೀ, ತಾವರೆಯ ವರ್ಣ ವೈಭವವಾಗಲೀ ಮಲ್ಲಿಗೆಯಲ್ಲಿಲ್ಲ, ಸಂಪಗೆಯ ಗಾಢ ಪರಿಮಳವೂ ಅದಕ್ಕಿಲ್ಲ. ಆದರೆ ಅದರದು ಸರಳ ನಿರಾಭರಣ ಸೌಂದರ್ಯ. ದಟ್ಟ ಹಸುರಿನ ಹಿನ್ನೆಲೆಯಲ್ಲಿ ಶುಭ್ರ ಶ್ವೇತವರ್ಣದಿಂದ, ನವಿರಾದ ಪರಿಮಳದಿಂದ ಕೂಡಿರುವ ಮಲ್ಲಿಗೆ ತನ್ನ ಸುತ್ತಲೂ ಒಂದು ನಿರ್ಮಲ ಪವಿತ್ರ ಪರಿವೇಷವನ್ನು ಸೃಷ್ಟಿಸಿಬಿಡುತ್ತದೆ.

ಕನ್ನಡದ ಕವಿಯೊಬ್ಬರು ಮುಕ್ತಜೀವಿಗಳನ್ನು 'ಉಪಶಾಂತರು, ಅದಿವಂದ್ಯರು, ಸಹಜರು' ಎಂದು ವರ್ಣಿಸಿದ್ದಾರೆ. ಮಲ್ಲಿಗೆಗೂ ಈ ಗುಣವಾಚಕಗಳು ಸಲ್ಲುತ್ತವೆ ಎಂದರೆ ತಪ್ಪಿಲ್ಲ. ಉಪಶಾಂತಿ, ಪೂಜ್ಯ ಭಾವವನ್ನು ಹುಟ್ಟಿಸುವ ವ್ಯಕ್ತಿತ್ವ, ಕೃತಕತೆ ಆಡಂಬರಗಳಿಲ್ಲದ ಸಹಜತನ– ಈ ಎಲ್ಲವನ್ನೂ ಮಲ್ಲಿಗೆಯಲ್ಲಿ ಪ್ರಕೃತಿ ಏಕತ್ರಗೊಳಿಸಿದೆ. ಹೂವುಗಳು ಭಗವಂತ ಭೂಮಿಯ ಮೇಲೆ ಬರೆದ ಕವಿತೆಗಳು ಎಂಬ ಮಾತೊಂದಿದೆ. ಭಗವಂತ ಬರೆದ 'ಪುಷ್ಪ ಕಾವ್ಯ'ಗಳಲ್ಲಿ ಮಲ್ಲಿಗೆ ಎಂಬುದು ಒಂದು ಚೆಲುವಾದ ಭಾವಗೀತೆ! ಬೆಳದಿಂಗಳ ರಾತ್ರಿಯಲ್ಲಿ ತೇಲಿಬರುವ ವೀಣಾ ನಾದದಂತೆ ಮಲ್ಲಿಗೆಯ ಹಿತವಾದ ಸೌಂದರ್ಯ ಹಾಗೂ ಸೌರಭ ಹೃದಯಾಂತರಾಳದ ಮಧುರ ತನನಗಳನ್ನು ಮಿಡಿಯುತ್ತದೆ. ಅದರ ಮಾರ್ದವತೆ, ಸರಳತೆ, ಶುಭ್ರತೆ, ಕಂಪು ಇವುಗಳೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡೇ ಆದಿಕವಿ ಪಂಪ ಅದನ್ನು 'ಪುಷ್ಪ ಲೋಕದ ರಾಣಿ' ಎಂದು ಕೀರ್ತಿಸಿರಬೇಕು.

ಮಾಗಿ ಕಳೆದು ಮಧುಮಾಸ ಕಾಲಿಡುವ ಮೊದಲೇ ಬಳ್ಳಿಯಿಂದ ಹೊರಗಿಣುಕುವ ಮಲ್ಲಿಗೆ ವಸಂತಾಗಮನವನ್ನು ಸಾರಿ ಹೇಳುತ್ತದೆ, ವಸಂತದಲ್ಲಂತೂ ಅದು ತನ್ನ ಸಮೃದ್ಧಿಯ ಶೃಂಗ ಸ್ಥಿತಿಯಲ್ಲಿ ಕಾಣಿಸಿಕೊಂಡು, ತನ್ನ ಪರಿಮಳವನ್ನು ಪಸರಿಸಿ, ಪೃಥ್ವಿಯನ್ನು ಅಕ್ಷರಶಃ 'ಗಂಧವತಿ'ಯನ್ನಾಗಿ ಮಾಡಿ, ಜನ್ಮಕೊಟ್ಟ ಭೂಮಿಯ ಋಣವನ್ನು ತೀರಿಸುತ್ತದೆ. ಮಲ್ಲಿಗೆಯ ಸುಗಂಧವನ್ನು ಎಲ್ಲೆಡೆ ಹರಡುವ ತೆಂಕಣಗಾಳಿ 'ಗಂಧ ವಾಹ'ವೆನ್ನಿಸಿಕೊಳ್ಳುವುದು ಈ ಕಾರಣಕ್ಕಾಗಿಯೇ! ಮಾವು, ಮಲ್ಲಿಗೆ, ಕೋಗಿಲೆಗಳನ್ನು ಒಟ್ಟು ಸೇರಿಸಿ, ನಮ್ಮ ಪ್ರಾಚೀನ ಕವಿಗಳು ಬಹಳಷ್ಟು ಕಡೆ ಹಾಡಿ, ಹೊಗಳಿದ್ದಾರೆ. 'ಬಂದಿರೆ ಮಾಮರಂಗಳಿರ, ಮಲ್ಲಿಗೆ ಬಂದಿರೆ, ಕೋಕಿಲಾಳಿ ನೀ ವೃಂದಮೆ ಬನ್ನಿಮಿತ್ತೆ...' ಎಂದು ವಸಂತ ಮಿತ್ರನಾದ ಕಾಮದೇವ ಮಾವಿನ ಮರ, ಮಲ್ಲಿಗೆ, ಕೋಗಿಲೆ, ದುಂಬಿಗಳನ್ನು ಕರೆ ಕರೆದು ಸ್ವಾಗತಿಸಿದನೆಂದು ಕವಿ ರನ್ನ ಹೇಳುತ್ತಾನೆ, ಆಧುನಿಕ ಕನ್ನಡ ಕಾವ್ಯ ಲೋಕದಲ್ಲೂ ಮಲ್ಲಿಗೆಯ ಕಂಪು ಸಾಕಷ್ಟು ದಟ್ಟವಾಗಿಯೇ ಇದೆ. ಕವಿ ಕೆ.ಎಸ್.ನರವರ ಪ್ರಥಮ ಕವಿತಾ ಸಂಕಲನ 'ಮೈಸೂರ ಮಲ್ಲಿಗೆ' ಹಾಗೂ ಅವರ ಸಮಗ್ರ ಕಾವ್ಯ 'ಮಲ್ಲಿಗೆಯ ಮಾಲೆ' ಕನ್ನಡಿಗರ ಭಾವಲೋಕದಲ್ಲಿ ಪರಿಮಳ ಸೂಸುತ್ತಲೇ ಇವೆಯಲ್ಲವೇ!

ಸಂಸ್ಕೃತದಲ್ಲಿ ಮಲ್ಲಿಗೆಯನ್ನು 'ಮಲ್ಲಿಕಾ' ಎನ್ನುತ್ತಾರೆ. 'ಮಲ್ಯತೇ ಮೂರ್ಧ್ನಿ ಮಲ್ಲಿಕಾ' ಎಂಬುದು 'ಮಲ್ಲಿಕಾ' ಎಂಬುದರ ನಿಷ್ಪತ್ತಿ ಎನ್ನುತ್ತಾರೆ ತಿಳಿದವರು. ತಲೆಯಲ್ಲಿ ಮುಡಿದುಕೊಳ್ಳುವ ಹೂವು ಮಲ್ಲಿಗೆ ಎಂಬುದು ಇದರ ಅರ್ಥ. ಹೆಣ್ಣು ಮಕ್ಕಳ ದಟ್ಟ ಕಪ್ಪು ತುರುಬಿನಲ್ಲಿನ ಬಿಳಿಯ ಮಲ್ಲಿಗೆ ಕೃಷ್ಣ–ಶ್ವೇತ ವರ್ಣ ವೈದೃಶ್ಯದಿಂದಾಗಿ ಮುಡಿದವರ ಕಡೆ ತಿರು ತಿರುಗಿ ನೋಡುವಂತೆ ಮಾಡುತ್ತದೆ. ಜೊತೆಗೆ ಮಲ್ಲಿಗೆಯ ದಂಡೆಯನ್ನು ಮುಡಿದ ಹೆಣ್ಣು ತನ್ನ ಸುತ್ತಲೂ ನವಿರಾದ ಪರಿಮಳದ ಆವರಣವನ್ನು ಕಟ್ಟಿಕೊಂಡು, ನಿಜವಾದ ಅರ್ಥದಲ್ಲಿ 'ಸುವಾಸಿನಿ' ಎನ್ನಿಸಿಕೊಳ್ಳುತ್ತಾಳೆ. ಕಾಳಿದಾಸ ಚಿತ್ರಿಸಿದ ಶಕುಂತಲೆ ತಾನು ಬೆಳೆದ ಕಣ್ವಾಶ್ರಮದಲ್ಲಿ ಒಂದು ಮಲ್ಲಿಗೆ ಬಳ್ಳಿಯನ್ನು ನೆಟ್ಟು, ತಾನು ನೀರು ಕುಡಿಯುವ ಮೊದಲೇ ಅದಕ್ಕೆ ನೀರೆರೆದು ಪ್ರೀತಿಯಿಂದ ಪೋಷಿಸಿದ್ದಳಂತೆ. ಪತಿಗೃಹಕ್ಕೆ ತೆರಳುವಾಗ ಆ ಬಳ್ಳಿಯಿಂದ ಬೀಳ್ಕೊಳ್ಳುವುದು ಆಕೆಗೆ ತುಂಬಾ ಕಷ್ಟವಾಯಿತಂತೆ.

ಜನ ಸಾಮಾನ್ಯರ ದೈನಂದಿನ ಮಾತುಗಳಲ್ಲೂ ಮಲ್ಲಿಗೆಯ ಪ್ರಸ್ತಾಪ ಬರುತ್ತಿರುತ್ತದೆ. 'ಹೊಟ್ಟೆಗೇ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬ ಗಾದೆ ಮಾತು ಯಾರಿಗೆ ಗೊತ್ತಿಲ್ಲ? ಅದು ಮಲ್ಲಿಗೆಯನ್ನು ಹಳಿಯುವುದಿಲ್ಲ; ಬದಲಾಗಿ, ಹಸಿವನ್ನು ಸಹಿಸಿಕೊಂಡು, ಮಲ್ಲಿಗೆಯನ್ನು ಮೆಚ್ಚುವ ರಸಿಕ ಮನೋವೃತ್ತಿಯನ್ನು ಸೂಚಿಸಿ, ಅಪ್ರತ್ಯಕ್ಷವಾಗಿ ಮಲ್ಲಿಗೆಯನ್ನು ಹೊಗಳುತ್ತದೆ. ಎಳೆಯ ಮಗುವಿನ ನಿಷ್ಕಲಂಕ ನಗುವನ್ನು 'ಮಲ್ಲಿಗೆಯ ನಗೆ' ಎನ್ನುತ್ತೇವೆ; ಬಿಳಿಯಾದ ಮೃದುವಾದ ಅನ್ನವನ್ನು ಮಲ್ಲಿಗೆಗೆ ಹೋಲಿಸುತ್ತೇವೆ. ಸರ್ವಶುಕ್ಲೆಯಾದ ಸರಸ್ವತಿ ತುಷಾರ ಧವಲ ಮಲ್ಲಿಗೆ ಹಾರವನ್ನು ಧರಿಸಿದ್ದಾಳೆ ಎಂಬ ನಂಬಿಕೆ ನಮ್ಮಲ್ಲಿದೆ, ನವದಂಪತಿಗಳು ಮಲ್ಲಿಗೆಯ ಹಾರವನ್ನು ವಿನಿಮಯ ಮಾಡಿಕೊಂಡು ವೈವಾಹಿಕ ಜೀವನದ ಪವಿತ್ರ ಪರಿಮಳ ಲೋಕಕ್ಕೆ ಕಾಲಿಡುತ್ತಾರೆ. ಒಟ್ಟಿನಲ್ಲಿ ಮಲ್ಲಿಗೆ ಪರಿಶುಭ್ರತೆಯ ಸಂಕೇತ; ಶಿಶು ಕಾಣುವ ಕನಸಿನಂತೆ, ಮಹಾತ್ಮರ ಮನಸ್ಸಿನಂತೆ ಶುದ್ಧ ಸಾತ್ವಿಕ ಸಂಕೇತ!

■ ವೈನತೇಯ

## ಮಾತೇ ಮುತ್ತು

★ ಬೇರೆಯವರ ಉಪಕಾರವನ್ನು ಮರೆಯುವುದು ನೀಚತನ, ಅಪಕಾರ ಮರೆಯುವುದು ಉತ್ತಮರ ಗುಣ.
–ತಿರುಕ್ಕುರಳ್

★ ಕೆಟ್ಟ ಚಾರಿತ್ರ್ಯದವರ ಮನೆಯಲ್ಲಿರುವುದು, ಅಲ್ಲಿಗೆ ಅತಿಥಿಗಳಾಗಿ ಹೋಗುವುದು ಸಲ್ಲದು. ಇದಕ್ಕಿಂತ ನರಕದಲ್ಲಿರುವುದು ಒಳ್ಳೆಯದು. ನರಕವನ್ನು ಅನುಭವಿಸುವುದರಿಂದ ಪಾಪ ನಾಶವಾಗುತ್ತದೆ. ಆದರೆ ಹೀನ ಚಾರಿತ್ರ್ಯದವನ ಮನೆಯಲ್ಲಿರುವುದರಿಂದ ಪಾಪ ಹೆಚ್ಚುತ್ತದೆ.
–ಜಾತಕ ಕತೆ

★ ಇತಿಹಾಸವನ್ನು ಮರೆತವರು ಇತಿಹಾಸ ಸೃಷ್ಟಿಸಲಾರರು.
–ಬಿ.ಆರ್.ಅಂಬೇಡ್ಕರ್

★ ವ್ಯಕ್ತಿಯ ಉನ್ನತಿಯಿಂದ ಸಮಾಜದ ಉನ್ನತಿ, ಸಮಾಜದ ಉನ್ನತಿಯಿಂದ ವ್ಯಕ್ತಿಯ ಉನ್ನತಿ. ವ್ಯಕ್ತಿ ಪೂರ್ಣತಃ ಸಮಾಜದಲ್ಲಿರುವವನೇ.
–ಬಾಬು ಗುಲಾಬರಾಯ್

★ ವಿದ್ಯಾರ್ಥಿಗಳು ಭತ್ತದ ಚೀಲಗಳಾಗಬಾರದು, ಭತ್ತದ ಗದ್ದೆಗಳಾಗಬೇಕು.
–ಕುವೆಂಪು

★ ತಪ್ಪು ಮಾಡಿದಾಗ ತಪ್ಪೊಪ್ಪಿಕೊಳ್ಳುವವ ಜಾಣ. ತಪ್ಪು ಮಾಡಿಲ್ಲದಾಗ ತಪ್ಪೊಪ್ಪಿಕೊಳ್ಳುವವ ವಿವಾಹಿತ.
–ಅನಾಮಿಕ

★ ಪ್ರೇಮವಿರದ ವಿವಾಹವಿದೆ ಎಂಬುದಾದರೆ, ವಿವಾಹವಿರದ ಪ್ರೇಮ ಕೂಡ ಇರುತ್ತದೆ.
–ಫ್ರ್ಯಾಂಕಲೀನ್

★ ತನ್ನ ಉದ್ಯೋಗವನ್ನು ಜೀವನೋಪಾಯ ಮಾರ್ಗವಾಗಿಸದೆ, ತನ್ನ ಜೀವನದ ಮಾರ್ಗವನ್ನಾಗಿ ಮಾಡಿಕೊಳ್ಳುವವನೇ ಪುರುಷ ಶ್ರೇಷ್ಠ.
–ಮೇರಿ ಬೇಕ್ಸ್ ಎಡ್ಡಿ

★ ಬೇಕಾದ್ದು, ಬೇಡವಾದದ್ದು ಎರಡನ್ನೂ ಸಮಾನವಾಗಿ ತಿಳಿಯಬೇಕು.
–ಮಹಾವೀರ

★ ಮಹಾಪುರುಷರು ಯಾರನ್ನೂ ಅಪಮಾನ ಗೊಳಿಸುವುದಿಲ್ಲ, ಅಪಮಾನ ಸಹಿಸುವುದೂ ಇಲ್ಲ.
–ಹೋಮರ್

★ ಮದುವೆ ಆಗುವುದಕ್ಕಿಂತ ಮೊದಲು ಗಂಡಸಿಗೆ ಹೆಂಗಸು ಒಂದು ರಹಸ್ಯ, ಮದುವೆಯಾದ ಮೇಲೆ ಒಂದು ಸಮಸ್ಯೆ!
–ತ್ರಿವೇಣಿ

★ ಪ್ರತಿಯೊಂದು ಸಮಸ್ಯೆಗೂ ಸೀಮಿತ ಅವಧಿ ಇದೆ. ಪ್ರತಿಯೊಂದು ಪರ್ವತಕ್ಕೂ ಒಂದು ಶಿಖರವಿದೆ. ಪ್ರತಿ ಕಣಿವೆಗೂ ಒಂದು ತಳವಿದೆ. ಯಾವ ಸಮಸ್ಯೆಯೂ ಶಾಶ್ವತವಲ್ಲ. ಬಿರುಗಾಳಿಗಳು ಕೊನೆಗೆ ಸೂರ್ಯನಿಗೆ ದಾರಿ ಕೊಡಲೇಬೇಕು.
–ಲಿಯೋ ಟಾಲ್‌ಸ್ಟಾಯ್